# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ



## ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ.ವ್ಹಿ.ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ,ಸಿಂದಗಿ-586128

**ಸಂಶೋಧನಾ ವಿಷಯ**

## ಮುಖ್ಯಮಂತ್ರಿ ಸಿದ್ದರಾಮಯ್ಯನರ ರಾಜಕೀಯ ವಿಚಾರಧಾರೆಗಳು


**ಸಂಶೋಧನಾ ವಿದ್ಯಾರ್ಥಿ**

ಭೀಮಾಶಂಕರ ಪಡದಳ್ಳಿ

ರ.ನಂ A2057827

**ಮಾರ್ಗದರ್ಶಕರು**

ಡಾ॥ ಮಲ್ಲಿಕಾರ್ಜುನ್ ಮಿಂಚ್ ಎಂ.ಎ, ಪಿ.ಎಚ್‌ಡಿ

ಹಿರಿಯ ಪ್ರಾಧ್ಯಾಪಕರು ಹಾಗೂ ಸಂಯೋಜಕರು ರಾಜ್ಯಶಾಸ್ತ್ರ ವಿಭಾಗ
ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ.ವ್ಹಿ.ಸಾಲಿಮಠ ವಿಜ್ಞಾನ
ಮಹಾವಿದ್ಯಾಲಯ ಸಿಂದಗಿ-586128


**2022-23**


Co-ordinator IQAC
G. P. Porwal Arts, Comm & V. V. Salimath
Science College, SINDGI-586128. Dt.Vijayapur

Principal,
G. P Porwal Arts, Comm &
V. V. Salimath Sc. College
SINDGI-586128 College Code

Head
Dept. of Political Science

# ಪ್ರಮಾಣ ಪತ್ರ

ಕುಮಾರ **ಭೀಮಾಶಂಕರ ಪಡದಳ್ಳಿ** ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿ ಇವರು "ಮುಖ್ಯಮಂತ್ರಿ ಸಿದ್ದರಾಮಯ್ಯನವರ ರಾಜಕೀಯ ವಿಚಾರಧಾರೆಗಳು" ಎಂಬ ಯೋಜನಾ ಕಾರ್ಯವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದಾರೆ. ಬಿ.ಎ ರಾಜ್ಯಶಾಸ್ತ್ರ ಪದವಿಗಾಗಿ ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಯೋಜನಾ ಕಾರ್ಯವನ್ನು ಇದುವರೆಗೂ ಯಾವುದೇ ಪದವಿಗಾಗಿ ಸಲ್ಲಿಸಿರುವದಿಲ್ಲವೆಂದು ದೃಢೀಕರಿಸುತ್ತೇನೆ.


ಪ್ರಾಂಶುಪಾಲರು,
ಡಾ|| ಡಿ.ಎಂ.ಪಾಟೀಲ್
ಜಿ.ಪಿ.ಪೋರವಾಲ ಕಲಾ, ವಾಣಿಜ್ಯ
ಹಾಗೂ ವ್ಹಿ.ವ್ಹಿ.ಸಾಲಿಮಠ ವಿಜ್ಞಾನ
ಮಹಾವಿದ್ಯಾಲಯ ಸಿಂದಗಿ

ಪ್ರಾಧ್ಯಾಪಕರು,
ಡಾ|| ಮಲ್ಲಿಕಾರ್ಜುನ್ ಮಿಂಚ್
ಎಂ.ಎ, ಪಿ.ಎಚ್‌ಡಿ
ಜಿ.ಪಿ.ಪೋರವಾಲ ಕಲಾ, ವಾಣಿಜ್ಯ
ಹಾಗೂ ವ್ಹಿ.ವ್ಹಿ.ಸಾಲಿಮಠ ವಿಜ್ಞಾನ
ಮಹಾವಿದ್ಯಾಲಯ ಸಿಂದಗಿ

ಸ್ಥಳ : ಸಿಂದಗಿ
ದಿನಾಂಕ : 24-08-2023

**Co-ordinator IQAC**
G. P. Porwal Arts, Comm & V. V. Salimath
Science College, SINDGI-586128. Dt Vijayapur

# ಮುಖ್ಯಮಂತ್ರಿ
# ಸಿದ್ದರಾಮಯ್ಯನವರ ರಾಜಕೀಯ ವಿಚಾರಧಾರೆಗಳು



Co-ordinator IQAC
G. P. Porwal Arts, Comm & V. V. Salimath
Science College, SINDGI-586128. Dt.Vijayapur

Principal,
G. P Porwal Arts, Comm &
V. V. Salimath Sc. College
SINDGI-586128. College Code: 523'

Head
Dept. of Political Science

# ಪರಿವಿಡಿ


ಪುಟ ಸಂಖ್ಯೆ

- ಅಧ್ಯಾಯ–1 — 01–03
  ಪ್ರಸ್ತಾವನೆ
- ಅಧ್ಯಾಯ–2 — 04–10
  ಸಿದ್ಧರಾಮಯ್ಯನವರ ಜೀವನ & ರಾಜಕೀಯ ಪ್ರವೇಶ
- ಅಧ್ಯಾಯ–3 — 11–23
  ಹಣಕಾಸು ಮಂತ್ರಿಯಾಗಿ ಸಿದ್ಧರಾಮಯ್ಯವರ ಪಾತ್ರ
- ಅಧ್ಯಾಯ–4 — 24–28
  ವಿರೋಧಪಕ್ಷದ ನಾಯಕನಾಗಿ ಸಿದ್ಧರಾಮಯ್ಯನವರ ಪಾತ್ರ
- ಅಧ್ಯಾಯ–5 — 29–39
  ಮುಖ್ಯಮಂತ್ರಿಯಾಗಿ ಸಿದ್ಧರಾಮಯ್ಯನವರ ಸಾಧನೆಗಳು
- ಅಧ್ಯಾಯ–6 — 40–44
  ಉಪಸಂಹಾರ
  - ✓ ಗ್ರಂಥಸೂಚಿ
  - ✓ ಚಿತ್ರ ಸಂಪುಟ


Co-ordinator IQAC
G. P. Porwal Arts, Comm & V. V. Salimath
Science College, SINDGI-586128. Dt.Vijayapur

Principal,
G. P. Porwal Arts, Comm &
V. V. Salimath Sc. College
SINDGI-586128. College Code 523[illegible]

Head
Dept. of Political Science

# ಅಧ್ಯಾಯ–1
# ಪ್ರಸ್ತಾವನೆ

## ಪೀಠಿಕೆ

ಜಗತ್ತಿನಲ್ಲಿ ಮಾನವನು ತನ್ನ ಬೇಡಿಕೆಗಳನ್ನು ಕೇವಲ ಒಂಟಿಯಾಗಿ ಪೂರೈಸಿಕೊಳ್ಳಲು ಸಾಧ್ಯವಿಲ್ಲ. ತನ್ನ ಸಮುದಾಯ ಜೀವನಕ್ಕಾಗಿ ದಾರಿ ಕಂಡುಕೊಂಡಿದ್ದಾನೆ. ಹೀಗಾಗಿ ಮಾನವನು ಸಂಘಜೀವಿ. ಇದಕ್ಕೆ ಪೂರಕವಾಗಿ ಸಾಮಾಜಿಕ ಹಾಗೂ ರಾಜಕೀಯ ಜೀವಿಯಾಗಿದ್ದಾನೆ. ಮಾನವನು ತನ್ನ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲು ಸಮಾಜ ಜೀವಿಯಾಗಿ ಎಷ್ಟೋ ಸಲ ಪರಿಸರದ ವಿರುದ್ಧವೂ ಕೂಡ ತನ್ನ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆಯನ್ನು ಸಂಘಟಿಸಿಕೊಂಡು ಮುನ್ನಡೆಯುತ್ತಿದ್ದಾನೆ. ರಾಜಕೀಯದಲ್ಲಿ ತನ್ನ ನೇಪತ್ಯ ಸಾಧಿಸಲು ಮಾನವನು ವಿಶ್ವದ ರಾಜಕೀಯ ಇತಿಹಾಸದಲ್ಲಿ ತನ್ನ ವಿಚಾರಧಾರೆಗಳನ್ನು ಇತರರ ಮೇಲೆ ಪ್ರಭಾವ ಬೀರಿ. ತನ್ನ ಅಧಿಪತ್ಯವನ್ನು ಸಾಧಿಸಲು ಹೊರಟಿದ್ದಾನೆ. ಇಲ್ಲಿ ನಾಯಕತ್ವ ಗುಣವು ಮುಖ್ಯವಾಗಿರುತ್ತದೆ. ನಾಯಕನಾದವನು ಪ್ರಗತಿಪರ ವಿಚಾರಧಾರೆ ಮತ್ತು ವಾಸ್ತವತೆಯಲ್ಲಿ ಭವಿಷ್ಯದ ಬಗ್ಗೆ ತೀವ್ರ ಕಾಳಜಿ ಹೊಂದಿದವನಾಗಿರುತ್ತಾನೆ. **"ಎಲ್ಲರೂ ನಮ್ಮವರೇ ಎನ್ನುವ ನಿಲುವು ಹೊಂದಿರುವುದು ಸಹಜ, ಸಾಮಾಜಿಕ ಕಾಳಜಿಯ ಹಿನ್ನಲೆಯಲ್ಲಿ ಇದನ್ನು ಸಾಧಿಸುವುದು ಬಹಳ ಮುಖ್ಯವಾದದ್ದು"** ಎಂಬ ಮಾತು ಗಮನಾರ್ಹವಾಗಿದೆ.

ಮಾನವನ ಚರಿತ್ರೆಯನ್ನು ನೋಡಿದರೆ ಆದಿಕಾಲದಿಂದಲೂ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿರುವುದನ್ನು ಕಾಣುತ್ತೇವೆ. ಆದರೆ ಇಂದು ಆಧುನಿಕ ವೈಜ್ಞಾನಿಕ ಯುಗದಲ್ಲಿ ಮಾನವನು ಪ್ರಪಂಚವನ್ನು ಅಂಗೈಯಲ್ಲಿ ಹಿಡಿದುಕೊಂಡು ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದಲು ಹಾತೊರೆಯುತ್ತಿದ್ದಾನೆ. ಮಾನವ ಕುಲವು ಸರ್ವಾಂಗೀಣ ಅಭಿವೃದ್ಧಿ ಹೊಂದಲು ಯೋಗ್ಯ ವ್ಯಕ್ತಿಯ ನಾಯಕತ್ವವು ಬೇಕೇ ಬೇಕು. ಹಾಗೆಯೇ ತನ್ನ ಕೌಶಲ್ಯದ ಬಗ್ಗೆ ಹೆಚ್ಚು ಗಮನವನ್ನು ಕೇಂದ್ರೀಕರಿಸಿ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಆಡಳಿತ ಮತ್ತು ಸಮಾಜ ಸುಧಾರಣೆ, ಆರ್ಥಿಕ ಅಭಿವೃದ್ಧಿ ಹಾಗೂ ರಾಜಕೀಯ ಅಧಿಕಾರವನ್ನು ಪಡೆಯಲು ಮಾನವನು ಪ್ರಯತ್ನಿಸುತ್ತಿರುವದು ಸ್ವಾಭಾವಿಕವಾಗಿದೆ. ಒಮ್ಮನಸ್ಸಿನ ಜನತೆಯ ಪ್ರಾತಿನಿಧ್ಯವಹಿಸಿ ಆ ಸಿದ್ಧಾಂತ ಪ್ರತಿಪಾದನೆ ಹಾಗೂ ಜನತೆಯ ಏಳ್ಗೆಗಾಗಿ ಶ್ರಮಿಸುವವನು ನಾಯಕನಾಗಿ ಹೊರಹೊಮ್ಮುತ್ತಾನೆ. ಬ್ರಿಯಾನ್ ಟ್ರೇಸಿಯವರ ಪ್ರಕಾರ **"ಸಾಮಾನ್ಯರಲ್ಲಿ ಅಸಾಮಾನ್ಯವಾದುದನ್ನು ಸಾಧಿಸುವ ಸಾಮರ್ಥ್ಯವೇ ನಾಯಕತ್ವವಾಗಿದೆ"**. ನಾಯಕರು ಜನತೆಗೆ ಬೇಕಾದ ಅಗತ್ಯತೆಗಳನ್ನು ನಿರ್ಧರಿಸಿ ಅವುಗಳ ಪೂರೈಕೆಗೆ ಶ್ರಮಿಸುತ್ತಾರೆ. ಭಾರತದ ರಾಜಕೀಯ ಇತಿಹಾಸವನ್ನು ಸ್ವಾತಂತ್ರ್ಯ ಪೂರ್ವದಿಂದಲೂ ಮತ್ತು ಸ್ವಾತಂತ್ರ್ಯದ ನಂತರದ ದಿನಗಳನ್ನು ಗಮನಿಸಿದಾಗ ಹಲವಾರು ರಾಜಕೀಯ ನಾಯಕರು ನಮ್ಮ ನಾಡಿನ ಏಳ್ಗೆಗಾಗಿ ಶ್ರಮಿಸಿದ್ದಾರೆ. ಇಂಥ ಶ್ರೇಷ್ಠರಲ್ಲಿ, ಕರ್ನಾಟಕದ ಜಗಜ್ಯೋತಿ ಬಸವೇಶ್ವರರು, ಕಿತ್ತೂರಿನ ರಾಣಿ ಚೆನ್ನಮ್ಮಾ, ಸಂಗೊಳ್ಳಿ ರಾಯಣ್ಣ, ವಿಜಯನಗರದ ಹಕ್ಕಬುಕ್ಕರು ಮತ್ತು ಕೃಷ್ಣದೇವರಾಯ, ವಿಜಯನಗರದ ಸಾಮಂತ ಅರಸರಾದ ಕೃಷ್ಣರಾಜ ಒಡೆಯರರು, ಜಯಚಾಮರಾಜ ಒಡೆಯರರು, ಟಿಪ್ಪು ಸುಲ್ತಾನ ಮುಂತಾದ ನಾಯಕರು ದೇಶದ ಸ್ವಾತಂತ್ರ್ಯಪೂರ್ವ ಅಭಿವೃದ್ಧಿಗಾಗಿ ಶ್ರಮಿಸಿದವರಾಗಿದ್ದಾರೆ. ಕರ್ನಾಟಕದ ಚರಿತ್ರೆಯಲ್ಲಿ ಹಲವಾರು ಮಹನೀಯರ ಕಾಣಿಕೆಯು ಮಹತ್ವದ್ದಾಗಿದೆ. ಸ್ವಾತಂತ್ರ್ಯಾನಂತರದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ, ಡಾ॥ ಮೌಲಾನಾ ಅಬುಲ್‌ಕಲಾಮ್ ಆಜಾದ, ರಾಮಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ ಮುಂತಾದ ರಾಷ್ಟ್ರನಾಯಕರು ತಮ್ಮ ಸೈದ್ಧಾಂತಿಕ ನಿಲುವಿನೊಂದಿಗೆ ಭಾರತದ ಆಡಳಿತಾತ್ಮಕ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಹಾಗೂ ದೀನ–ದಲಿತರ, ಬಡವರ, ಮಹಿಳೆಯರ, ಏಳ್ಗೆಗೆ ಯಾವ ತತ್ವ ಸಿದ್ಧಾಂತದ ಮೇಲೆ ಸಾಮಾಜಿಕ ನ್ಯಾಯ, ಆರ್ಥಿಕ ಸ್ವಾತಂತ್ರ್ಯ, ರಾಜಕೀಯವಾಗಿ ಅನೇಕ ವರ್ಷಗಳಿಂದ ಶೋಷಣೆಗೊಂಡ ಜನಾಂಗದ ಸಾಮಾಜಿಕ ಕಳಕಳಿಯ ಚೇತನಗಳು ತಮ್ಮ ಚಿಂತನೆಯೊಂದಿಗೆ ಅಭಿವೃದ್ಧಿಯಾಗಲು ನಮ್ಮ ದೇಶದ ಪರಿಸರಕ್ಕೆ ಹೊಂದಿಕೆಯಾಗುವಂತಹ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಳ್ಳಲಾಗಿದೆ. ಉಳುವವನೇ ಭೂ ಒಡೆಯ ಹಾಗೂ ವಿದ್ಯಾರ್ಥಿಗಳಿಗೆ ಹಲವಾರು ಜನಪ್ರಿಯ ಯೋಜನೆಗಳು ಹಾಗೂ ಜನಪರ ಆಡಳಿತ ನಡೆಸಿದ ನಾಯಕರನ್ನು ನಮ್ಮ ನಾಡು ಕಂಡಿದೆ. ಇದೇ ಪ್ರಕಾರ, ಸಿದ್ದರಾಮಯ್ಯನವರು 1980ರ ದಶಕದಲ್ಲಿ ರಾಜಕೀಯ ಜೀವನ ಪ್ರಾರಂಭಿಸಿ ಶಾಸಕರಾಗಿ, ಸಚಿವರಾಗಿ, ಉಪಮುಖ್ಯಮಂತ್ರಿಯಾಗಿ, ವಿರೋಧಪಕ್ಷದ ನಾಯಕರಾಗಿ ಮತ್ತು ಮುಖ್ಯಮಂತ್ರಿಯಾಗಿ ಹಲವಾರು ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ರೈತರ, ದಿನ–ದಲಿತ ಹಿಂದುಳಿದ ಅಲ್ಪಸಂಖ್ಯಾತ ವರ್ಗದವರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಇವರು ನಿಷ್ಠುರ ಹಾಗೂ ದೃಢ ಸ್ವಭಾವದವರಾಗಿ ಈ ನಾಡಿನ ಒಳ್ಳೆಯ ಜನನಾಯಕರಲ್ಲಿ ಒಬ್ಬರು ಎನ್ನುವದಕ್ಕೆ ಅವರ ಜನಪರ ನೀತಿಯೇ ಕನ್ನಡಿಯಾಗಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ಜನಪರ ಕಾರ್ಯಗಳಲ್ಲಿ ತೊಡಗಿ, ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದು ರಾಜಕೀಯ, ಸಾಮಾಜಿಕ ವ್ಯವಸ್ಥೆಯನ್ನು ಸಶಕ್ತಗೊಳಿಸುವಲ್ಲಿ ಶ್ರಮಿಸುತ್ತಿದ್ದಾರೆ.

Co-ordinator IQAC
G. P. Porwal Arts, Comm & V. V. Salimath
Science College, SINDGI-586128. Dt.Vijayapur

Principal,
G. P Porwal Arts, Comm &
V. V. Salimath Sc. College
SINDGI-586128. College Code. 52

Head
Dept. of Political Sc
G. P. Arts, Comm & V. V.
College, SINDAGI-58